ಒ. ಎಸ್. ನಂ.17 /2022

ಪಿಡಬ್ಲೂ-1

ದಿನಾಂಕಃ 02.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ಶೇ.1 ರೂಗಳಂತೆ ಬಡ್ಡಿ ಕೊಡಬೇಕೆಂದು ಹಣ ಕೊಟ್ಟ ಸಮಯದಲ್ಲಿ ಮಾತುಕತೆ ಆಗಿತ್ತು. ನಿಪಿ 1 ರ ಛಾಪ ಕಾಗದ ಮುದ್ರಿಸಿದ ದಿನಾಂಕ ಮತ್ತು ಅ.ದಾ. ನಂ. 355/2015 ರ ಪ್ರನೋಟ್ ಮುದ್ರಿತ ದಿನಾಂಕ ಒಂದೇ ಎಂದರೆ ಸರಿಯಲ್ಲ. ನನ್ನ ಮಗ ಶಿವಪ್ಪ ನಿಗೆ ಸದರಿ ವ್ಯವಹಾರದ ಬಗ್ಗೆ ತಿಳುವಳಿಕೆ ಇರುತ್ತದೆ ಎಂದರೆ ಅವರು ಮನೆ ಬಿಟ್ಟು ಹೋಗಿ 21 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಗ ಅ.ದಾ ನಂ.355/2015 ರ ದಾವೆಯಲ್ಲಿ ವಕಾಲತ್ತು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಹಣ ವಾಪಸ್ಸು ಕೊಟ್ಟಿರುವ ವಿಚಾರ ಗೊತ್ತಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಶಾಮಣ್ಣ ಮತ್ತು ಶಿವಜೋಗಿ ಎಂಬುವವರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ಪ್ರತಿವಾದಿಗಳಿಂದ ಹೆಚ್ಚು ಹಣ ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ